


ಸೆಂಟ್ರಲ್ ಸ್ಟೇಷನ್

ಚರ್ಚ್ ನೋಡೋಣವೆಂದು ಬಸ್ ಹತ್ತಿಕೊಂಡು ಹೋದೆವು. ಒಬ್ಬೊಬ್ಬರಿಗೆ 5 ಯುರೋ ಪ್ರವೇಶ ಶುಲ್ಕ. ಒಳಗೆ ಹೋಗುತ್ತಿದ್ದಂತೆ ತಣ್ಣಗಿನ ವಾತಾವರಣವಿತ್ತು. ಅಲ್ಲಿ ಮೊದಲು ಗಮನಿಸಿದ್ದು, ಅಡ್ಡಾದಿಡ್ಡಿಯಾಗಿ ಕೊರೆದ ಗೋಡೆಯನ್ನು. ಆದರೆ ಅದೂ ಆಧುನಿಕ ಕಲೆಯಂತೆ ಆಕರ್ಷಣೀಯವಾಗಿ ಕಂಡಿತು. ಈ ಗೋಡೆಯ ಉಬ್ಬು ತಗ್ಗಿನ ರಚನೆಗಳು ಮಾರ್ದನಿಯನ್ನು ತಗ್ಗಿಸುತ್ತವಂತೆ. ಶಬ್ದ ಪ್ರಸರಣ ಚೆನ್ನಾಗಿ ಆಗುವುದರಿಂದ, ಆಗಾಗ ಕಾನ್ಸರ್ಟ್‌ಗಳು ಸಹ ನಡೆಯುತ್ತವೆ ಇಲ್ಲಿ. ಸುತ್ತಲೂ ಉಂಗುರದ ಮಾದರಿಯ ಬೆಳಕಿಂಡಿ ಇದ್ದುದರಿಂದ, ಬೆಳಕು ಸಮಾನವಾಗಿ ಎಲ್ಲೆಡೆ ಹರಡಿತ್ತು. ಒಂದು ಪುಟ್ಟ ಶಿಲುಬೆ ಬಿಟ್ಟರೆ ಚರ್ಚ್ ಎನ್ನುವಂತಹ ಯಾವ ಚಿಹ್ನೆಯೂ ಇರಲಿಲ್ಲ.

ಮರುದಿನ ಹತ್ತಿರದ ಯಾವುದಾದರೂ ಜಾಗ ನೋಡಿ ಬರೋಣವೆಂದು, ರೈಲಿನ ಸಂಪರ್ಕ ಎಲ್ಲೆಲ್ಲಿಗಿದೆಯೆಂದು ಹುಡುಕುತ್ತಿದ್ದ ನಮಗೆ, ಹತ್ತಿರದಲ್ಲಿ ಹೆಮೆನ್ಲಿನ್ನ ಎನ್ನುವ ಕೋಟೆಯಿದ್ದ ಊರು ಕಂಡಿತು. ಹೆಲ್ಸಿಂಕಿಯ ಸೆಂಟ್ರಲ್ ಸ್ಟೇಷನ್‌ನಿಂದ ಸುಮಾರು ಒಂದು ಗಂಟೆಯ ರೈಲು ಪ್ರಯಾಣವಷ್ಟೇ. ಟಿಕೆಟ್‌ಗಳನ್ನು ನಿಲ್ದಾಣದಲ್ಲೇ ಕೊಂಡುಕೊಂಡು, ರೈಲು ಹತ್ತಿದೆವು. ದೊಡ್ಡ ಕಿಟಕಿಗಳಿದ್ದ, ಆರಾಮವಾಗಿ ಕೂರಲು ಸುಖಾಸನಗಳಿದ್ದು ಸ್ವಚ್ಛವಾಗಿದ್ದ ಬೋಗಿಗಳಿದ್ದವು. ಹೆಲ್ಸಿಂಕಿಯ ಕಟ್ಟಡಗಳು ಹಿಂದಾಗುತ್ತಿದ್ದಂತೆ, ಬಣ್ಣದ ಹೂಗಳಿಂದ ತುಂಬಿದ್ದ ಹುಲ್ಲುಗಾವಲುಗಳು, ನಡುವೆಲ್ಲೋ ಒಂದೊಂದು ಕೆಂಪು ಬಣ್ಣದ ದೊಡ್ಡ ಮನೆಗಳು, ಪೈನ್ ಮರಗಳ ಸಾಲು, ಪುಟ್ಟ ಪಟ್ಟಣಗಳು ಕಾಣತೊಡಗಿದವು. ನಾವು ಕುಳಿತಿದ್ದ ಬೋಗಿಯಲ್ಲಿ ಸದ್ದು ಮಾಡುವವರೇ ಇರಲಿಲ್ಲ. ಪುಸ್ತಕ ಹಿಡಿದವರು, ಕಿವಿಗಳಲ್ಲಿ ಇಯರ್‌ಫೋನ್ ತುರುಕಿಕೊಂಡವರು, ಇಲ್ಲವೇ ಕಣ್ಣು ಮುಚ್ಚಿ ನಿದ್ರೆಗೆ ಶರಣಾದವರಿದ್ದರು. ಹೆಮೆನ್ಲಿನ್ನದಲ್ಲಿ ಇಳಿದಾಗ ಹೆಲ್ಸಿನ್ಕಿಯ ಗಡಿಬಿಡಿಕಾಣದೆ, ನಿಧಾನಗತಿಯಲ್ಲಿ ಸಾಗುವಂತಿತ್ತು ಆ ಊರು. ರೈಲು ನಿಲ್ದಾಣ ಕೂಡ ದೊಡ್ಡದಲ್ಲ, ಜನರಿಂದ ತುಂಬಿ ತುಳುಕುತ್ತಿರಲಿಲ್ಲ. ಪ್ರವಾಸಿಗರಂತೂ ಇರಲೇ ಇಲ್ಲ.

ವನಯವೆಸಿ ಎನ್ನುವ ಕೆರೆಯ ದಂಡೆಯ ಮೇಲೆ ಹಸಿರ ನಡುವೆ ಒಬ್ಬಂಟಿಯಾಗಿ ನಿಂತಿದೆ ಹೆಮೆನ್ಲಿನ್ನ ಕೋಟೆ. ಹಿಂದೆ ಆ ಸರೋವರದ ನಡುವಿನ ದ್ವೀಪದ ಮೇಲಿತ್ತಂತೆ. ಆದರೆ ಕಳೆದ ನೂರಾರು ವರ್ಷಗಳಲ್ಲಿ ಆ ಕೆರೆಯ ರೂಪುರೇಖೆ ಬದಲಾದ ಕಾರಣ ಈಗ ಮುಖ್ಯ ಭೂಮಿಕೆಗೆ ಸೇರಿ ಹೋಗಿದೆ. ಸುಮಾರು 13ನೇ ಶತಮಾನದಲ್ಲಿ ಫಿನ್‌ಲ್ಯಾಂಡ್ ಪ್ರಾಂತ್ಯ, ಸ್ವೀಡಿಷ್ ಸಾಮ್ರಾಜ್ಯದ ಭಾಗವಾಗಿದ್ದಾಗ ಇದನ್ನು ಕಟ್ಟಲಾಯಿತೆಂದು ಹೇಳಲಾಗುತ್ತದೆ. ಆಗೆಲ್ಲ ಜಲಮಾರ್ಗಕ್ಕೆ ಬಹಳ ಪ್ರಾಮುಖ್ಯ ಇದ್ದ ಸಮಯದಲ್ಲಿ ಅವುಗಳ ಮೇಲೆ ಕಾವಲಿಡಲು, ನಿರ್ಬಂಧಿಸಲು, ಸುಂಕ ಹೇರಲು, ರಾಜಕೀಯ ಸಮಾರಂಭಗಳಿಗೆ, ವಿಶೇಷ ಸಭೆಗಳಿಗೆ, ಯುದ್ಧ ತಂತ್ರಗಳನ್ನು ರಚಿಸಲಷ್ಟೇ ಈ ಕೋಟೆಯ ಬಳಕೆಯಾಗುತ್ತಿತ್ತು. ಹಾಗಾಗಿ ಇದು ರಾಜಕುಮಾರನಿಲ್ಲದಿದ್ದ ಕೋಟೆ. ರಷ್ಯನ್ನರ ಆಳ್ವಿಕೆ ಬಂದ ಮೇಲೆ, ಇದರ ಪ್ರಾಮುಖ್ಯ ಕುಗ್ಗಿ ಕೇವಲ ಸೆರೆಮನೆಯಾಯಿತು. ಈಗ ಬರುವ ಪ್ರವಾಸಿಗರಿಗೆ ಇತಿಹಾಸದ ಕಥೆಗಾರನಾಗಿ ಉಳಿದಿದೆ.

ಬೇಸಿಗೆಯ ದಿನದ ಬೆಚ್ಚಗಿನ ವಾತಾವರಣಕ್ಕೆ ಮೈಯೊಡ್ಡಿ ಕಾಲ್ನಡಿಗೆಯಲ್ಲಿ ರೈಲು ನಿಲ್ದಾಣದಿಂದ ಹೊರಟೆವು. ಎಲ್ಲೆಲ್ಲೂ ಬಣ್ಣ ಬಣ್ಣದ ಹೂಗಳನ್ನು ಹೊತ್ತ ಪೊದರುಗಳು, ಪುಟ್ಟ ಗಿಡಮೂಲಿಕೆಗಳು ನಳನಳಿಸುತ್ತಿದ್ದವು. ಹಾಗೇ ನಡೆಯುತ್ತಾ ಹೋದಂತೆ ವನಯವೆಸಿ ಕೆರೆ ಸ್ವಲ್ಪ ಸ್ವಲ್ಪವಾಗಿ ಗೋಚರಿಸಿತು. ಆಕಾಶದ ಬಿಂಬವನ್ನು ತನ್ನೊಳಗೆ ಸೆರೆಹಿಡಿದು ವಿಶಾಲವಾಗಿ, ಗಾಂಭೀರ್ಯವನ್ನೇ ಮೈವೆತ್ತು ಹಬ್ಬಿದಂತಿತ್ತು ಅದು. ಮುಂದೆ ಕೆಲ ಹೆಜ್ಜೆ ನಡೆದ ಮೇಲೆ ಮುಚ್ಚಿದ್ದ ಅಂಗೈಯೊಳಗಿನ ವಸ್ತುವನ್ನು ಬಿಡಿಸಿ ಎದುರಿಗಿಡುವಂತೆ, ತನ್ನ ದಡದಲ್ಲಿದ್ದ ಕೆಂಪು ಕೋಟೆಯನ್ನು ತೆರೆದು ತೋರಿಸಿತ್ತು. ಆ ಮಧ್ಯಕಾಲೀನ ಕೋಟೆಯ ಇಡಿಯ ಕಟ್ಟಡವನ್ನು ಕೆಂಪು ಬಣ್ಣದ ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ. ಪ್ರವೇಶ ದ್ವಾರದ ಬಳಿ ಇದ್ದ ದಾರಿ ಕಿರಿದಾಗಿ ತಿರುವಾಗಿತ್ತು. ಹಿಂದೆ ಇದು ಕೆಲಸಗಾರರಿಂದ, ನಿತ್ಯದ ಚಟುವಟಿಕೆಗಳಿಂದ ತುಂಬಿಕೊಂಡಿದ್ದಿರಬಹುದು. ಅಲ್ಲಿಂದ ಮುಂದೆ ದಿ ಗ್ರೇಟ್ ಹಾಲ್ ಎನ್ನುವ ಸಭಾಂಗಣ ನೋಡಬಹುದು. ಸುತ್ತಲಿನ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಮುಖ್ಯವಾದ ನಿರ್ಣಯಗಳನ್ನು ಅಲ್ಲೇ ತೆಗೆದುಕೊಳ್ಳಲಾಗುತ್ತಿತ್ತಂತೆ. ಅದೆಷ್ಟು ಗುಟ್ಟಿನ ವಿಷಯಗಳಿಗೆ ಈ ಗೋಡೆಗಳು ಕಿವಿಯಾಗಿರಬಹುದಲ್ಲವೇ? ಒಂದು ಸಣ್ಣ ವಸ್ತು ಸಂಗ್ರಹಾಲಯ ಕೂಡ ಅಲ್ಲಿದ್ದು ಶಿರಸ್ತ್ರಾಣಗಳು, ಕತ್ತಿ, ಕಠಾರಿಗಳು, ಎದೆ ಕವಚಗಳು, ನಿತ್ಯ ಬಳಕೆಯ ವಸ್ತುಗಳನ್ನು ಕಾಣಬಹುದಿತ್ತು. ಕಲಾವಿದನೊಬ್ಬನ ಕೈಚಳಕದಿಂದ ಇತ್ತೀಚಿನ ದಿನಗಳಲ್ಲಿ ಅರಳಿದ ಪೈನ್ ಕೋನ್‌ಗಳ ಸುಂದರ ಕಲಾಕೃತಿಗಳನ್ನೂ ಪ್ರದರ್ಶನಕ್ಕೆ ಇಡಲಾಗಿತ್ತು. ಹಾಗೇ ಮುಂದೆ ಸಾಗಿದರೆ ಕೆಲಸಗಾರರ ವಾಸಕ್ಕೆಂದು ಬಳಸುತ್ತಿದ್ದ ಕೇವಲ ಮೂಲಭೂತ ಸೌಕರ್ಯಗಳಷ್ಟೇ ಇದ್ದ ಸಣ್ಣ ಕೋಣೆಗಳಿದ್ದುದನ್ನು ನೋಡಬಹುದಿತ್ತು. ಮತ್ತುಳಿದಂತೆ ಈ ಕೋಟೆಯ ಗೋಡೆಗಳು, ಬಾಗಿಲುಗಳು ಎಷ್ಟು ಸರಳವಾಗಿದ್ದವೆಂದರೆ, ಯಾವ ರೀತಿಯ ಕುಸುರಿ ಕಲಾತ್ಮಕತೆಯೂ ಇಲ್ಲಿಲ್ಲ. ಅದು ಈ ಕಟ್ಟಡಕ್ಕೆ ಬೇಕಿರಲಿಲ್ಲ ಕೂಡ. ಇದು ಸಂಭ್ರಮ, ಹಬ್ಬಗಳಿಗೆ ತೆರೆದುಕೊಂಡ ಕೋಟೆಯಲ್ಲ. ಸೈನಿಕರ ಕಷ್ಟಗಳಿಗೆ ಕಣ್ಣಾದ ಕೋಟೆ. ಯುದ್ಧ ತಂತ್ರಗಳಿಗೆ, ರಾಜನೀತಿಗೆ ಕಿವಿಯಾದ ಕೋಟೆ. ಶಸ್ತ್ರಾಸ್ತ್ರಗಳ, ಮದ್ದುಗುಂಡುಗಳ ಸಂಗ್ರಹಕ್ಕೆ ನೆರವಾದ ಕೋಟೆ.

ಅಲ್ಲಿಂದ ಹೊರಬಂದ ಮೇಲೆ, ಸುತ್ತಲೂ ಹರಡಿದ್ದ ಮೆತ್ತಗಿನ ಹುಲ್ಲು ಹಾಸಿನ ಮೇಲೆ ಓಡಾಡಿ ಕೋಟೆಗೊಂದು ಪ್ರದಕ್ಷಿಣೆ ಹಾಕಿ ಎಲ್ಲ ದಿಕ್ಕುಗಳಿಂದಲೂ ಅದರ ಸೌಂದರ್ಯ ಕಣ್ತುಂಬಿಸಿಕೊಳ್ಳುವ ಪ್ರಯತ್ನ ಮಾಡಿದೆವು. ಕೋಟೆಯ ಹೆಸರನ್ನೇ ತನ್ನದಾಗಿಸಿಕೊಂಡಿದ್ದ ಆ ಪಟ್ಟಣದ ಬೀದಿಗಳಲ್ಲಿ ಓಡಾಡಿ ಖುಷಿಪಟ್ಟೆವು. ಹೀಗೆ ಬೇಸಿಗೆಯ ಸುಂದರ ದಿನವೊಂದು ಮುಗಿದಿತ್ತು.



ಸುವೋಮೆನ್ಲಿನ್ನದಲ್ಲಿದ್ದ ಬಂಕರ್